<u>ಮಂಗಳೂರು ವಿಶ್ವವಿದ್ಯಾನಿಲಯ</u>

ದಿನಾಂಕ 03.05.2016 ರಂದು ಅಪರಾಹ್ನ ಗಂಟೆ 03:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡಾವಳಿಗಳು.

ಉಪಸ್ಥಿತ ಸದಸ್ಯರು

ಅನುಪಸ್ಥಿತ ಸದಸ್ಯರು:

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

<u>ಪ್ರಸಾವಿಕ</u>

1. 2015–16 ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಹೊಂದಿರುವ ವಿವರಗಳ ಬಗ್ಗೆ ಸಿಂಡಿಕೇಟು ಸಭೆಯು ಚರ್ಚಿಸಿತು. ಬಹಳಷ್ಟು ವಿಭಾಗಗಳಲ್ಲಿ ನಿಗದಿತ ವಿದ್ಯಾರ್ಥಿ ಪರಿಮಿತಿಗಿಂತ (Intake) ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿ ಪ್ರವೇಶಾತಿ ಹೊಂದಿರುವುದನ್ನು ಸಿಂಡಿಕೇಟು ಸಭೆಯು ಗಮನಿಸಿತು. ಜೊತೆಗೆ ಖಾಸಗಿ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿರುವ ಬಗ್ಗೆಯೂ ಗಮನಿಸಿ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಕಡಿಮೆ ಪ್ರವೇಶಾತಿಯಾಗಿರುವ ವಿವಿಧ ಕೋರ್ಸುಗಳಿಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ಆಕರ್ಷಿಸಿ ಪ್ರವೇಶಾತಿ ಪ್ರಕ್ರಿಯೆಯನ್ನು ಹೆಚ್ಚಿಸಲು ಕ್ರಿಯಾಯೋಜನೆಯನ್ನು ಕೈಗೊಳ್ಳಬೇಕೆಂದು ಸಭೆಯು ತೀರ್ಮಾನಿಸಿತು.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಸಿಂಡಿಕೇಟು ಮತ್ತು ಶೈಕ್ಷಣಿಕ ಮಂಡಳಿಯ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿ ಪಡೆಯಲು ತೀರ್ಮಾನಿಸಲಾಯಿತು.

1.	ಡಾ. ಕೆ. ಸುಂದರ ನಾಯಕ್	ಅಧ್ಯಕ್ಷರು
2.	ಶ್ರೀ ಕೆ. ಪ್ರಸನ್ನ ಕುಮಾರ್ ರೈ	ಸದಸ್ಯರು
3.	ಶ್ರೀ ಹರೀಶ್ ಆಚಾರ್	ಸದಸ್ಯರು
4.	ಶ್ರೀ ಮೋಹನಚಂದ್ರನ್ ನಂಬಿಯಾರ್	ಸದಸ್ಯರು
5.	ಶ್ರೀ ಅಮೃತ್ ಶೆಣೈ	ಸದಸ್ಯರು
6.	ಶ್ರೀ ತೇಜಸ್ವಿ ರಾಜ್	ಸದಸ್ಯರು
7.	ಶ್ರೀಮತಿ ಜಯಶ್ರೀ ಕಾಮತ್	ಸಂಚಾಲಕರು

ಈ ಉಪಸಮಿತಿಯು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ಭೇಟಿ ನೀಡಿ ಅಲ್ಲಿರುವ ಸೌಲಭ್ಯಗಳು ಹಾಗೂ ಇತರೆ ವಿಚಾರಗಳನ್ನು ಶಿಕ್ಷಕರ ಜೊತೆ ಚರ್ಚಿಸಿ ಆ ವಿಭಾಗಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ

ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸಮಿತಿ ರಚನೆಯ ಪ್ರಕಟಣೆಯ ದಿನಾಂಕದಿಂದ ಆರು ವಾರಗಳೊಳಗೆ ನೀಡುವಂತೆ ತೀರ್ಮಾನಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ವಿ.ಸ.2:1(2016)

ವಿಷಯ : ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯವು ನಿಗದಿ ಪಡಿಸಬೇಕಾದ ಎಲ್ಲಾ ಶುಲ್ಕದ ಬಗ್ಗೆ.

ನಿರ್ಣಯ: ಅ) 2016–17ನೇ ಸಾಲಿಗೆ ಈ ಕೆಳಕಂಡ ಕೋರ್ಸುಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಶುಲ್ಕವನ್ನೇ ಮುಂದುವರಿಸುವುದಾಗಿ ತೀರ್ಮಾನಿಸಲಾಯಿತು.

1. ಎಂ.ಎಸ್ಸಿ. ಬಯೋಟೆಕ್ನಾಲಜಿ
2. ಎಂ.ಎಸ್ಸಿ. ವಸ್ತು ವಿಜ್ಞಾನ
3. ಎಂ.ಎಸ್ಸಿ.ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ
4. ಪ್ರವಾಸೋದ್ಯಮ
5. ಎಂ.ಎಸ್ಸಿ.ಜಿಯೋಇನ್ಫಾರ್ಮೆಟಿಕ್ಸ್
6. ಎಂ.ಎಸ್ಸಿ.ಇಲೆಕ್ಟ್ರಾನಿಕ್ಸ್
7. ಎಂ.ಎಸ್ಸಿ. ಮೆರಾಯಿನ್ ಜಿಯಾಲಜಿ
8. ಎಂ.ಎ ಕನ್ನಡ
9. ಎಂ.ಎಸ್ಸಿ. ಕಂಪ್ಯೂಟರ್ ಸಾಯನ್ಸ್
10. ಎಂ.ಎಸ್ಸಿ. ಇಂಡಸ್ಟ್ರಿಯಲ್ ಕೆಮಿಸ್ಟ್ರಿ
11. ಎಂ.ಎಸ್ಸಿ. ಆರ್ಗಾನಿಕ್ ಕೆಮಿಸ್ಟ್ರಿ

ಆ) i) ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ/ಮಡಿಕೇರಿ/ಚಿಕ್ಕಅಳುವಾರ, ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ಇಲ್ಲಿ ನಡೆಸುವ ಪದವಿ/ ಸ್ನಾತಕೋತ್ತರ ಪದವಿ/ ಡಿಪ್ಲೋಮ/ ಪಿ.ಜಿ ಡಿಪ್ಲೋಮ/ ಸರ್ಟಿಫಿಕೇಟ್ / ವೃತ್ತಿಆಧಾರಿತ ಕೋರ್ಸು/ ಪಿ.ಎಚ್.ಡಿ/ ಸಂಯೋಜನೆ/ ಸೇವಾ ಶುಲ್ಕ ಹಾಗೂ ವೃತ್ತಿ ಆಧಾರಿತ ಕೋರ್ಸು ಇತ್ಯಾದಿ ಶುಲ್ಕಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ದರಕ್ಕೆ ಹೆಚ್ಚುವರಿಯಾಗಿ ಶೇಕಡ 5 (5%) ರಂತೆ ಹೆಚ್ಚುವರಿ ಮಾಡಲು ತೀರ್ಮಾನಿಸಲಾಯಿತು.

ii) ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು ಶೈಕ್ಷಣಿಕ 2015–16ನೇ ಸಾಲಿಗೆ ವಿಧಿಸಿರುವ ಶುಲ್ಕದ ಮೇಲೆ ಶೇ. 10ರಷ್ಟು ಹೆಚ್ಚುವರಿ ಶುಲ್ಕವನ್ನು ನಿಗದಿಪಡಿಸುವಂತೆ

ನಿರ್ಣಯಿಸಲಾಯಿತು.

ಇ) ಮಂಗಳೂರು ವಿಶ್ವವಿದ್ಯಾನಿಲಯದ ಆವರಣ ಮತ್ತು ಘಟಕ ಕಾಲೇಜಾದ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ನಡೆಸಲಾಗುವ ಪಿ.ಜಿ.ಡಿಪ್ಲೋಮಾ ಇನ್ ಯೋಗಿಕ್ ಸೈನ್ಸ್ ಮತ್ತು ಸರ್ಟಿಫಿಕೇಟ್ ಕೋರ್ಸ್ ಇನ್ ಯೋಗಿಕ್ ಸೈನ್ಸ್ ಕೋರ್ಸುಗಳಿಗೆ 2016–17ನೇ ಸಾಲಿಗೆ ಹಾಲಿ ಇರುವ ಶುಲ್ಕ ದರವನ್ನೇ ಮುಂದುವರಿಸಲು ತೀರ್ಮಾನಿಸಲಾಯಿತು.

ಈ) ವಿಶ್ವವಿದ್ಯಾನಿಲಯದ ಸಂಧ್ಯಾ ಕಾಲೇಜಿನಲ್ಲಿ ನಡೆಸಲ್ಪಡುವ ಕೋರ್ಸುಗಳಿಗೆ ಪ್ರಸ್ತುತ ನಿಗದಿಪಡಿಸಿರುವ ವಿಶ್ವವಿದ್ಯಾನಿಲಯ ಕಾಲೇಜಿನ ಶುಲ್ಕವನ್ನೇ ವಿಧಿಸುವಂತೆ ನಿರ್ಣಯಿಸಲಾಯಿತು.

ಉ) ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಗಳಿಗೆ 2016–17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕ ತೊಂದರೆಗಳಿಂದ ಪ್ರವೇಶಾತಿ ಶುಲ್ಕ ಹಾಗೂ ಇತರೆ ಉಳಿದ ಶುಲ್ಕವನ್ನು ಭರಿಸಲು ಕಷ್ಟವೆಂದು ಕಂಡುಬಂದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎರಡು ಕಂತುಗಳಲ್ಲಿ ಪ್ರವೇಶಾತಿ ಮತ್ತು ಇತರೆ ಶುಲ್ಕವನ್ನು ಪಾವತಿಸಲು ಅವಕಾಶ ಮಾಡಿಕೊಡುವಂತೆ ತೀರ್ಮಾನಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ವಿ.ಸ.2:2(2016)

ವಿಷಯ : ಕು.ಜೋತ್ಸ್ನಾ ಇವರಿಗೆ ಇಂಗ್ಲೀಷ್ ಭಾಷಾ ಕಲಿಕೆಯಿಂದ ವಿನಾಯಿತಿ ನೀಡುವ ಬಗ್ಗೆ.

ನಿರ್ಣಯ: ಸದರಿ ವಿಷಯದ ಬಗ್ಗೆ ರಾಜ್ಯ ಸರ್ಕಾರದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕ್ರಮವಾಗಿ ಎಸ್.ಎಸ್.ಎಲ್.ಸಿ. ಮತ್ತು ಪದವಿ ಪೂರ್ವ ತರಗತಿಯಲ್ಲಿ ಸದರಿ ವಿದ್ಯಾರ್ಥಿಗೆ ಇಂಗ್ಲೀಷ್ ಭಾಷೆ ವಿಷಯವನ್ನು ವ್ಯಾಸಂಗ ಮಾಡುವುದರಿಂದ ವಿನಾಯಿತಿ ನೀಡಿರುವುದರ ಹಿನ್ನೆಲೆಯಲ್ಲಿ ಪದವಿ ಮಟ್ಟದಲ್ಲಿಯೂ ಇಂಗ್ಲೀಷ್ ವಿಷಯವನ್ನು ಅಭ್ಯಾಸ ಮಾಡುವುದರಿಂದ ವಿನಾಯಿತಿ ನೀಡುವುದರ ಬಗ್ಗೆ ಸರ್ಕಾರದ ಅನುಮತಿಯ ನಿರೀಕ್ಷೆಯ ಮೇರೆಗೆ ವಿದ್ಯಾರ್ಥಿಯ ಕೋರಿಕೆಯನ್ನು ಪರಿಗಣಿಸಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನುಮುಕ್ತಾಯಗೊಳಿಸಿದರು.

ಕುಲಸಚಿವರು ಕುಲಪತಿಗಳು

ಸಭೆಯ ದಿನಾಂಕ: 03.05.2016

ನಿರ್ಣಯ: ಅ) 2016–17ನೇ ಸಾಲಿಗೆ ಈ ಕೆಳಕಂಡ ಕೋರ್ಸುಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಶುಲ್ಕವನ್ನೇ ಮುಂದುವರಿಸುವುದಾಗಿ ತೀರ್ಮಾನಿಸಲಾಯಿತು.

1. ಎಂ.ಎಸ್ಸಿ. ಬಯೋಟೆಕ್ನಾಲಜಿ
2. ಎಂ.ಎಸ್ಸಿ. ವಸ್ತು ವಿಜ್ಞಾನ
3. ಎಂ.ಎಸ್ಸಿ.ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ
4. ಪ್ರವಾಸೋದ್ಯಮ
5. ಎಂ.ಎಸ್ಸಿ.ಜಿಯೋಇನ್ಫಾರ್ಮೆಟಿಕ್ಸ್
6. ಎಂ.ಎಸ್ಸಿ.ಇಲೆಕ್ಟ್ರಾನಿಕ್ಸ್
7. ಎಂ.ಎಸ್ಸಿ. ಮೆರಾಯಿನ್ ಜಿಯಾಲಜಿ
8. ಎಂ.ಎ ಕನ್ನಡ
9. ಎಂ.ಎಸ್ಸಿ. ಕಂಪ್ಯೂಟರ್ ಸಾಯನ್ಸ್
10. ಎಂ.ಎಸ್ಸಿ. ಇಂಡಸ್ಟ್ರಿಯಲ್ ಕೆಮಿಸ್ಟ್ರಿ
11. ಎಂ.ಎಸ್ಸಿ. ಆರ್ಗಾನಿಕ್ ಕೆಮಿಸ್ಟ್ರಿ

ಆ) i) ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ/ಮಡಿಕೇರಿ/ಚಿಕ್ಕಅಳುವಾರ, ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ಇಲ್ಲಿ ನಡೆಸುವ ಪದವಿ/ ಸ್ನಾತಕೋತ್ತರ ಪದವಿ/ ಡಿಪ್ಲೋಮ/ ಪಿ.ಜಿ ಡಿಪ್ಲೋಮ/ ಸರ್ಟಿಫಿಕೇಟ್ / ವೃತ್ತಿಆಧಾರಿತ ಕೋರ್ಸು/ ಪಿ.ಎಚ್.ಡಿ/ ಸಂಯೋಜನೆ/ ಸೇವಾ ಶುಲ್ಕ ಹಾಗೂ ವೃತ್ತಿ ಆಧಾರಿತ ಕೋರ್ಸು ಇತ್ಯಾದಿ ಶುಲ್ಕಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ದರಕ್ಕೆ ಹೆಚ್ಚುವರಿಯಾಗಿ ಶೇಕಡ 5 (5%) ರಂತೆ ಹೆಚ್ಚುವರಿ ಮಾಡಲು ತೀರ್ಮಾನಿಸಲಾಯಿತು.

ii) ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು ಶೈಕ್ಷಣಿಕ 2015–16ನೇ ಸಾಲಿಗೆ ವಿಧಿಸಿರುವ ಶುಲ್ಕದ ಮೇಲೆ ಶೇ. 10ರಷ್ಟು ಹೆಚ್ಚುವರಿ ಶುಲ್ಕವನ್ನು ನಿಗದಿಪಡಿಸುವಂತೆ ನಿರ್ಣಯಿಸಲಾಯಿತು.

ಇ) ಮಂಗಳೂರು ವಿಶ್ವವಿದ್ಯಾನಿಲಯದ ಆವರಣ ಮತ್ತು ಘಟಕ ಕಾಲೇಜಾದ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ನಡೆಸಲಾಗುವ ಪಿ.ಜಿ.ಡಿಪ್ಲೋಮಾ ಇನ್ ಯೋಗಿಕ್ ಸೈನ್ಸ್ ಮತ್ತು ಸರ್ಟಿಫಿಕೇಟ್ ಕೋರ್ಸ್ ಇನ್ ಯೋಗಿಕ್ ಸೈನ್ಸ್ ಕೋರ್ಸುಗಳಿಗೆ 2016–17ನೇ ಸಾಲಿಗೆ ಹಾಲಿ ಇರುವ ಶುಲ್ಕ ದರವನ್ನೇ ಮುಂದುವರಿಸಲು ತೀರ್ಮಾನಿಸಲಾಯಿತು.

ಈ) ವಿಶ್ವವಿದ್ಯಾನಿಲಯದ ಸಂಧ್ಯಾ ಕಾಲೇಜಿನಲ್ಲಿ ನಡೆಸಲ್ಪಡುವ ಕೋರ್ಸುಗಳಿಗೆ ಪ್ರಸ್ತುತ ನಿಗದಿಪಡಿಸಿರುವ ವಿಶ್ವವಿದ್ಯಾನಿಲಯ ಕಾಲೇಜಿನ ಶುಲ್ಕವನ್ನೇ ವಿಧಿಸುವಂತೆ ನಿರ್ಣಯಿಸಲಾಯಿತು.

ಉ) ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಗಳಿಗೆ 2016–17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕ ತೊಂದರೆಗಳಿಂದ ಪ್ರವೇಶಾತಿ ಶುಲ್ಕ ಹಾಗೂ ಇತರೆ ಉಳಿದ ಶುಲ್ಕವನ್ನು ಭರಿಸಲು ಕಷ್ಟವೆಂದು ಕಂಡುಬಂದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎರಡು ಕಂತುಗಳಲ್ಲಿ ಪ್ರವೇಶಾತಿ ಮತ್ತು ಇತರೆ ಶುಲ್ಕವನ್ನು ಪಾವತಿಸಲು ಅವಕಾಶ ಮಾಡಿಕೊಡುವಂತೆ ತೀರ್ಮಾನಿಸಲಾಯಿತು.

*****

ಸಭೆಯ ದಿನಾಂಕ: 03.05.2016

ನಿರ್ಣಯ: ಸದರಿ ವಿಷಯದ ಬಗ್ಗೆ ರಾಜ್ಯ ಸರ್ಕಾರದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕ್ರಮವಾಗಿ ಎಸ್.ಎಸ್.ಎಲ್.ಸಿ. ಮತ್ತು ಪದವಿ ಪೂರ್ವ ತರಗತಿಯಲ್ಲಿ ಸದರಿ ವಿದ್ಯಾರ್ಥಿಗೆ ಇಂಗ್ಲೀಷ್ ಭಾಷೆ ವಿಷಯವನ್ನು ವ್ಯಾಸಂಗ ಮಾಡುವುದರಿಂದ ವಿನಾಯಿತಿ ನೀಡಿರುವುದರ ಹಿನ್ನೆಲೆಯಲ್ಲಿ ಪದವಿ ಮಟ್ಟದಲ್ಲಿಯೂ ಇಂಗ್ಲೀಷ್ ವಿಷಯವನ್ನು ಅಭ್ಯಾಸ ಮಾಡುವುದರಿಂದ ವಿನಾಯಿತಿ ನೀಡುವುದರ ಬಗ್ಗೆ ಸರ್ಕಾರದ ಅನುಮತಿಯ ನಿರೀಕ್ಷೆಯ ಮೇರೆಗೆ ವಿದ್ಯಾರ್ಥಿಯ ಕೋರಿಕೆಯನ್ನು ಪರಿಗಣಿಸಲು ನಿರ್ಣಯಿಸಲಾಯಿತು.

*****